ಶ್ರೀ ಎಸ್. ಆರ್. ಬೊಮ್ಮಾಯಿ.—ಎರಡು ಗಂಟೆ ಮುಂಚಿತವಾಗಿ ನಮಗೆ ಉತ್ತರವನು ಕೊಟ್ಟರೆ ಅದರ ಮೇಲೆ ಸಪ್ಲಿಮೆಂಟರಿ ಪ್ರಶ್ನೆಗಳನ್ನು ನಾವು ತಯಾರು ಮಾಡುವುದಕ್ಕೆ ಅನುಕೂಲವಾಗುತ್ತದೆ. ಮತ್ತು ನಾವು ಪ್ರಶ್ನೆಗಳನ್ನು ಕೇಳುವುದಕೆ ಹೆಚ್ಚು ಸಮಯ ಕಳೆಯಬೇಕಾಗಿಲ್ಲ. ಉತ್ತರ ಹೊರಗಡೆ ಹೋಗುತ್ತದೆ ಎನ್ನುವ ಭಾವನೆ ಇದರೆ ಈಗ ಕೌನ್ಸಿಲ್ ಸದಸ್ಯರಿಗೆ ಪ್ರಶ್ನೆಗಳಿಗೆ ಉತ್ತರವನ್ನು ಮನೆಗಳಿಗೆ ಕಳುಹಿಸಿಕೊಡುತ್ತಿದ್ದಾರೆ. ರೂಲ್ ೪೧ ರ ಪ್ರಕಾರ ಸಭೆ ಪ್ರಾರಂಭವಾಗುವುದಕ್ಕೆ ಎರಡು ಗಂಟೆ ಮುಂಚೆ ಪ್ರಶ್ನೆಗಳಿಗೆ ಉತ್ತರವನ್ನು ಸದಸ್ಯರಿಗೆ ಕಳುಹಿಸಿಕೊಡಬೇಕೆಂದು ಇದೆ. ಆದರೆ ಪ್ರಕಾರ ಸದಸ್ಯರಿಗೆ ಪ್ರಶ್ನೆಗಳಿಗೆ ಉತ್ತರವನ್ನು ಕಳುಹಿಸಿಕೊಟ್ಟರೆ ಆವರು ಸಪ್ಲಿಮೆಂಟರಿ ಪ್ರಶೆ ಯನ್ನು ಕೇಳುವುದಕ್ಕೆ ಪ್ರಿಪೇರ್ ಮಾಡಿಕೊಂಡು ಬರುವುದಕ್ಕೆ ಅನುಕೂಲವಾಗುತ್ತದೆ. ಮತು ಪ್ರಶ್ನೆಯನ್ನು ಕೇಳುವುದಕ್ಕೆ ಹೆಚ್ಚು ಸಮಯವನ್ನೂ ಕೂಡ ತೆಗೆದುಕೊಳ್ಳುವುದಿಲ್ಲ. ರೂಲ್ ೪೫ ಪ್ರಕಾರ ಪ್ರಶ್ನೋತ್ತರ ಗಳನ್ನು ಸದಸ್ಯರಿಗೆ ಕೊಟ್ಟಾಕ್ಷಣಕ್ಕೇ ಅದು ಪಬ್ಲಿಷ್ ಆಗುವುದಿಲ್ಲ. ಅದನ್ನು ಸಭೆಯ ಮುಂದೆ ಇಟ್ಟ ಮೇಲೆ ಮಾತ್ರ ಅದು ಪಬ್ಲಿಷ್ ಆಗುತ್ತದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಈ ವಿಚಾರ ಬಂದಾಗ ೨ ಗಂಟೆ ಮುಂಚಿತವಾಗಿ ಪ್ರಶ್ನೋತ್ತರಗಳ ಪಟ್ಟಿಯನ್ನು ಒದಗಿಸಬೇಕೆಂದು ತೀರ್ಮಾನ ಕೂಡ ಆಗಿದೆ. ಅದನ್ನು ಸೆಕ್ರೆಟರಿಯವರೂ ಕೂಡ ಒಪ್ಪಿಕೊಂಡಿದ್ದಾರೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಸದಸ್ಯರು ಏನು ಹೇಳುತ್ತಿದ್ದಾರೆ ಆ ವಿಷಯವನ್ನು ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳುತ್ತೇವೆ.

1-30 P.M.

## Extending the time limit for repayment of loans

251. SRI ANNA RAO PATIL (Alland).— Will the Minister for Agriculture and Parliamentary Affairs be pleased to state;—

(*a*) whether it is not a fact that Government had extended the time limit for payment of over due loan instalments due to the Department of Agriculture the Karnataka Agro Industries Corporation in respect of Tractors, Pumpsets. Power Tillers, etc., upto 28-2-1978;

(*b*) whether Government is aware that the Hyderabad Karnataka Area has suffered attacks of servere famines during the last three or four years and that the Loanees are not in a position to repay the loans and interest regularly ;

(*c*) If so, whether Government intend to extend the limit of time of repayment of loan and Interest for a further period of one year *i.e.*, upto 28-2-1978 ?

SRI K.H. RANGANATH (Minister for Agriculture and Parliamantary Affairs).—

(a) Yes.

(*b*) Yes, including the fact the harvest during the year 1977-78 was good.

(*c*) No.

ಶ್ರೀ ಆಣ್ಣಾರಾವ್ ಪಾಟೀಲ್.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ''ಹೌದು''. ಈ ವಿಷಯವನ್ನೊಳಗೊಂಡಂತೆ ೧೯೭೭–೭೮ನೇ ಸಾಲಿನಲ್ಲಿ ಫಸಲು ಚೆನ್ನಾಗಿ ಬಂದಿದೆ'' ಎಂದು ಹೇಳಿದ್ದೀರಿ. (ಇ) ಪ್ರಶ್ನೆಗೆ ಉತ್ತರವಾಗಿ ''ಇಲ್ಲ'' ಎಂದು ಹೇಳಿದ್ದೀರಿ. ಗುಲ್ಬರ್ಗ ಮತ್ತಿತರ ಕಡೆಗಳಲ್ಲಿ ಸ್ಕೇರ್ಸಿಟಿ ಇದೆಯೆಂದು ಮಾನ್ಯ ರಾಜ್ಯಪಾಲರು ಭಾಷಣದಲ್ಲೇ ಹೇಳಿದ್ದಾರೆ. ಆದ್ದರಿಂದ ಸಾಲದ ವಸೂಲಾತಿಯನ್ನು ಇನ್ನೂ ಒಂದೆರಡು ವರ್ಷಗಳವರೆಗೆ ಮುಂದಕ್ಕೆ ಹಾಕಲು ಸರ್ಕಾರ ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ನನ್ನ (ಅ) ನಲ್ಲಿ ಉತ್ತರ ಕೊಡುತ್ತಾ ''ಹೌದು'' ಎಂದು ಹೇಳಿ, ಅದಕ್ಕೆ ಕಾಮ ಹಾಕಿ ನಂತರ ಈ ವಿಷಯವನ್ನೊಳಗೊಂಡಂತೆ ೧೯೭೭–೭೮ನೇ ಸಾಲಿನಲ್ಲಿ ಫಸಲು ಚೆನ್ನಾಗಿ ಬಂದಿದೆ'' ಎಂದು ಹೇಳಿದ್ದೇನೆ. ೧೯೭೭–೭೮ರಲ್ಲಿ ಬೆಳೆ ಚೆನ್ನಾಗಿ ಬಂದಿತ್ತು, ಅಲ್ಲದೇ ಈ ಸಾಲವನ್ನು ತೆಗೆದುಕೊಂಡಿರುವವರೂ ಕೂಡ ಅನುಕೂಲವಾಗಿಯೇ ಇದ್ದಾರೆ. ಹಿಂದೆ ಈಗಾಗಲೇ ಅವರಿಗೆ ಸಾಲದ ವಸೂಲಾತಿಯ ಬಗ್ಗೆ ರಿಯಾಯಿತಿಯನ್ನು ಸರ್ಕಾರದವರು ತೋರಿಸಿರುವುದರಿಂದ ಮತ್ತೆ ಈ ರಿಯಾಯಿತಿಯನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದೇನೆ.

ಶ್ರೀ ಆಣ್ಣಾರಾವ್ ಪಾಟೀಲ್.—ನಮ್ಮ ಗುಲ್ಬರ್ಗಾದಲ್ಲಿ ಕುಡಿಯುವುದಕ್ಕೂ ಕೂಡ ನೀರಿಲ್ಲ. ಕಳೆದ ೩ ವರ್ಷಗಳಿಂದಲೂ ನಮ್ಮ ಭಾಗದಲ್ಲಿ ಸ್ಕೇರ್ಸಿಟಿ ಇರುವುದರಿಂದ ಸಿಂಪಲ್ ಇಂಟರೆಸ್ಟ್ ಕೊಡುವುದಕ್ಕೂ ಕೂಡ ಕಷ್ಟವಾಗಿದೆ.

ಶ್ರೀ ಕೆ. ಪೆಚ್. ರಂಗನಾಥ್.—ಸ್ವಾಮಿ, ಸಾಲದ ಹಣ ಬಹಳ ದೊಡ್ಡ ಪ್ರಮಾಣದಲ್ಲಿ ಬಾಕಿ ಇದೆ. ಈಗಾಗಲೇ ಸುಮಾರು ೬ ಕೋಟಿ ೭೦ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಒದಗಿಸಿದಂತಾಗಿದೆ. ಇದರಲ್ಲಿ ಸುಮಾರು ೩ ಕೋಟಿ ಚಿಲ್ಲರೆ ಅಸಲು ಮತ್ತು ೧ ಕೋಟಿ ಚಿಲ್ಲರೆ ಸಿಂಪಲ್ ಇಂಟರೆಸ್ಟ್ ಇದೆ. ಇಷ್ಟು ಹಣ ಇರುವುದರಿಂದ ಪ್ರತಿವರ್ಷವೂ ಇದನ್ನು ವಸೂಲ್ಮಾಡದೆ ಬಿಡುತ್ತಾ ಹೋದರೆ ಆ ರೈತರಿಗೇ ಮುಂದೆ ದೊಡ್ಡ ಹೊರಲಾಗದ ಹೊರೆಯಾಗುತ್ತದೆ. ಕಳೆದ ವರ್ಷ ಅಂದರೆ ೧೯೭೭–೭೮ರಲ್ಲಿ ಬೆಳೆ ಚೆನ್ನಾಗಿ ಆಗಿರುವುದರಿಂದ ರೈತರು ತಮ್ಮ ಸಾಲವನ್ನು ಒಂದೇ ಸಾರಿ ಕೊಟ್ಟರೆ ಅವರಿಗೆ ಹೊರೆ ಕಡಿಮೆಯಾಗುವುದಲ್ಲದೆ ಪೀನಲ್ ಇಂಟರೆಸ್ಟ್ ಕೂಡ ಬೀಳುವುದಿಲ್ಲ. ಇಲ್ಲದೇ ಹೋದರೆ ರೈತರಿಗೆ ತೊಂದರೆಯಾಗುತ್ತದೆ.

ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಈ ವರ್ಷ ಕೂಡ ಗುಲ್ಬರ್ಗಾದಲ್ಲಿ ಮಳೆಯಿಲ್ಲದೆ, ಅಭಾವ ಪರಿಸ್ಥಿತಿ ಉಂಟಾಗಿದೆ. ಬಿತ್ತನೆ ಕೂಡ ಆಗಿಲ್ಲ. ರೈತರ ಪರಿಸ್ಥಿತಿಯಂತೂ ಚಿಂತಾಜನಕವಾಗಿದೆ. ಆದ್ದರಿಂದ ಸಾಲದ ವಸೂಲಾತಿಯನ್ನು ಮುಂದಕ್ಕೆ ಹಾಕುವುದು ಒಳ್ಳೆಯದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪೆಚ್. ರಂಗನಾಥ್.—ಈ ವರ್ಷದ ಮಳೆ ಈಗ ಪ್ರಾರಂಭವಾಗುತ್ತಿದೆ. ಇದಕ್ಕೆ ಮೊದಲೇ ತಾವು ಮಳೆಯೇ ಬಂದಿಲ್ಲ ಎಂದು ಹೇಳುವುದು ಸರಿಯಲ್ಲ. ಕಳೆದ ವರ್ಷವೂ ಉತ್ತಮ ಬೆಳೆಯಾಗಿದೆ, ಮತ್ತು ಈ ವರ್ಷವೂ ಒಳ್ಳೆಯ ಬೆಳೆ ಆಗುತ್ತದೆ. ಮಾನ್ಯ ಸದಸ್ಯರು ರೈತರನ್ನು ಪ್ರೋತ್ಸಾಹಿಸಿ ಸಾಲವನ್ನು ಹಿಂದಿರುಗಿಸುವಂತೆ ಮಾಡಬೇಕು. ಇದರಿಂದ ರೈತರಿಗೂ ಕೂಡ ಹೊರೆ ಕಡಿಮೆಯಾಗುತ್ತದೆ.

ಶ್ರೀ ಗೋವಿಂದ ಪಿ, ಒಡೆಯ ರಾಜ್.—ಸ್ವಾಮಿ, ೧೯೭೭–೭೮ರಲ್ಲಿ ಫಸಲು ಚೆನ್ನಾಗಿದೆ ಎಂದು ಹೇಳಿದ್ದಾರೆ. ಅಂದರೆ ಇದರ ಅರ್ಥ ೧೯೭೭ನೇ ಇಸವಿಗೆ ಹಿಂದೆ ಬೆಳೆ ಚೆನ್ನಾಗಿರಲಿಲ್ಲವೆಂದು ಮಾನ್ಯ ಮಂತ್ರಿಯವರೇ ಒಪ್ಪಿಕೊಂಡಂತಾಯಿತು. ಅಲ್ಲದೆ ಇದು ನಿಜವಾದ ಪರಿಸ್ಥಿತಿಯೂ ಕೂಡ ಆಗಿದೆ. ಇದನ್ನು ಮಾನ್ಯ ಮಂತ್ರಿಯವರು ಅರ್ಥ ಮಾಡಿಕೊಂಡು ರೈತರು ತಮ್ಮ ಸಾಲವನ್ನು ಒಂದೇ ಗಂಟಿನಲ್ಲಿ ಕೊಡಬೇಕೆಂದು ಹೇಳುವುದು ಸರಿಯಲ್ಲ. ಅವರು ಬಹಳ ತೊಂದರೆಯಲ್ಲಿದ್ದಾರೆ. ಇದು ಮೊದಲನೆಯದು. ಇನ್ನು ಎರಡನೆಯದು ಏನೆಂದರೆ ತಾವು ಸಾಲದ ವಸೂಲಾತಿಯನ್ನು ಮುಂದಕ್ಕೆ ಹಾಕಿದರೆ ತಮಗೆ ಪೀನಲ್ ಇಂಟರೆಸ್ಟ್ ಬರುವುದಲ್ಲದೆ ಆ ಬಡ ರೈತರಿಗೂ ಅನುಕೂಲವಾಗುತ್ತದೆಂದು ನನ್ನ ಭಾವನೆ. ಆದ್ದರಿಂದ ಮಾನ್ಯ ಮಂತ್ರಿಯವರು ಈ ಬಡ ರೈತರಿಗೆ ಸಾಲದ ವಸೂಲಾತಿಯನ್ನು ಇನ್ನೂ ಒಂದು ವರ್ಷ ಮುಂದಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಪೆಚ್. ರಂಗನಾಥ್.—ಮಾನ್ಯಸದಸ್ಯರಿಗೇ ಗೊತ್ತಿರುವಂತೆ ೧೯೭೬–೭೭ರಲ್ಲಿ ಅಂದರೆ ರಾಕ್ಷಸನಾಮ ಸಂವತ್ಸರದಲ್ಲಿ ಇಡೀ ರಾಜ್ಯದಲ್ಲಿ ವಿಪರೀತ ಮಳೆಯಾಗಿದೆ. ಆಗ ಬೆಳೆಯೂ ಚೆನ್ನಾಗಿ ಆಗಿದೆ. ಆದರೆ ಕೆಲವು ಕಡೆ ಜಾಸ್ತಿ ಮಳೆ ಆಗಿದ್ದ ಕಡೆಗಳಲ್ಲಿ ಫಸಲು ಹೋಗಿರಬಹುದು. ಅಲ್ಲಿ

ಪವರ್ ಟಿಲ್ಲರ್, ಟ್ರಾಕ್ಟರ್ ಮುಂತಾದವುಗಳನ್ನು ಇಟ್ಟು ಕೊಂಡಿರುವವರೇ ಹೆಚ್ಚು ಅಂದರೆ ಅವರು ಧಡೂತಿ ಆಸಾಮಿಗಳು ಎಂದು ಯಾರು ಬೇಕಾದರೂ ಹೇಳುತ್ತಾರೆ. ನೀರಾವರಿ ಪ್ರದೇಶವಿದ್ದು ವರ್ಷಕ್ಕೆ ಎರಡು ಬೆಳೆ ತೆಗೆದು ಕೊಳ್ಳುವವರಿಗೆ ನಾವು ಈ ರಿಯಾಯಿತಿಯನ್ನು ತೋರಿಸುವುದಾದರೆ ಅದು ತಪ್ಪಾಗುತ್ತದೆ. ಇದು ಹೇಗಿದೆ ಅಂದರೆ ''ಮಳೆ ಬಂದಾಗ ಉಪ್ಪಿನವನು ಆತ್ತ ಎಂದು ತೆಂಗಿನ ಕಾಯಿ ಮಾರುವವನೂ ಆತ್ತ'' ಅನ್ನುವ ಹಾಗಿದೆ.

ಒಬ್ಬ ಮಾನ್ಯ ಸದಸ್ಯರು.—ಗುಲ್ಬರ್ಗಾ ಜಿಲ್ಲೆಯಲ್ಲಿನ ಜನ ಸಾಲದ ವಸೂಲಾತಿ ಬಗ್ಗೆ ತಮಗೆ ಮನವಿ ಮಾಡಿಕೊಂಡಿರುವಂತೆ ಇನ್ನೂ ಒಂದು ವರ್ಷ ರಿಯಾಯಿತಿ ಕೊಡುವುದಕ್ಕಾಗುವುದಿಲ್ಲವೆ?

ಶ್ರೀ ಕೆ. ಹೆಚ್. ರಂಗನಾಥ್.—೧೯೭೮ನೇ ಫೆಬ್ರುವರಿವರೆಗೆ ಸಾಲದ ಮರುಪಾವತಿ ಬಗ್ಗೆ ರಿಯಾಯಿತಿಯನ್ನು ಸರ್ಕಾರ ಕೊಟ್ಟಿತ್ತು. ಆದರೆ ಈಗ ತಾವು ಇನ್ನೂ ಒಂದು ವರ್ಷದವರೆಗೆ ರಿಯಾಯಿತಿ ಕೇಳುತ್ತಿರುವುದರಿಂದ ಅದು ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ.

ಒಬ್ಬ ಸದಸ್ಯರು.—ತಾವು ಶೇಕಡವಾರು ವಸೂಲಾತಿಯ ನ್ನು ನಿಗದಿ ಮಾಡುವುದನ್ನು ಬಿಟ್ಟು ಹೊಸ ಸದಸ್ಯರಿಗೆ ಯಾರು ಸಾಲವನ್ನು ಪಾವತಿ ಮಾಡಿದ್ದಾರೋ ಅಂಥವರಿಗೆ ಮತ್ತೆ ಸಾಲ ಕೊಡುವುದಕ್ಕೆ ವ್ಯವಸ್ಥೆ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಕೆ. ಎಚ್. ರಂಗನಾಥ್.—ಅದು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಂದ ಕೊಟ್ಟಿರುವುದು. ನೀವು ಕೇಳುವ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಮಂತ್ರಿಗಳಿಗೆ ಆ ಭಾಗದ ಜನರ ಬಗ್ಗೆ ತಪ್ಪು ತಿಳುವಳಿಕೆ ಇದೆ ಎಂದು ಕಾಣುತ್ತೆ. ಅಲ್ಲಿರುವ ಎಲ್ಲರೂ ಶ್ರೀಮಂತರು ಎಂಬ ಭಾವನೆ ಮಾನ್ಯ ಮಂತ್ರಿಗಳಿಗೆ ಇರುವ ಹಾಗೆ ಕಾಣಿಸುತ್ತದೆ.

†ಶ್ರೀ ಕೆ.ಎಚ್. ರಂಗನಾಥ್.—ನಾನು ಎಲ್ಲರೂ ಶ್ರೀಮಂತರು ಎಂದು ಹೇಳಲಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಆ ಭಾಗದಲ್ಲಿ ಬಿದರೆ, ಗುಲ್ಬರ್ಗ, ರಾಯಚೂರು ಭಾಗಗಳಲ್ಲಿ ನೀರಾವರಿ ಇರತಕ್ಕ ಭಾಗವನ್ನು ಬಿಟ್ಟು ಬೇರೆ ಕಡೆಗಳಲ್ಲಿ ೧೦೦ ಎಕರೆ ಜಮೀನು ಇದ್ದಂಥ ಒಬ್ಬ ರೈತನೂ ಎರಡು ಎತ್ತು ಒಂದು ಬಂಡಿಯನ್ನು ಇಟ್ಟು ಕೊಂಡು ಸಂಸಾರ ಮಾಡುವುದು ಕಷ್ಟವಾಗಿದೆ. ಆ ರೀತಿಯ ಪರಿಸ್ಥಿತಿ ಇಲ್ಲಿ ಹಳೇ ಮೈಸೂರು ಭಾಗದಲ್ಲಿ ಇಲ್ಲ. ಇಲ್ಲಿ ೨೦ ಎಕರೆ ಜಮೀನಿದ್ದರೂ ಕೂಡ ಸುಖವಾಗಿ ವರ್ಷಕ್ಕೆ ಎರಡು ಬೆಳೆ ತೆಗೆದುಕೊಂಡು ಜೀವನ ಮಾಡಬಹುದು. ಆದರೆ ಅಲ್ಲಿ ಬಿಣ ಪ್ರದೇಶದಲ್ಲಿ ೧೦೦ ಎಕರೆ ಜಮೀನಿದ್ದರೂ ಕೂಡ ವರ್ಷಕ್ಕೊಂದು ಬೆಳೆ ತೆಗೆದು ಕೊಂಡು ಇಡೀ ವರ್ಷ ಜೀವನ ಮಾಡುವುದಕ್ಕಾಗುವುದಿಲ್ಲ. ನಾನು ದೊಡ್ಡ ರೈತನಿಗೆ ಸಹಾಯ ಮಾಡಿ ಎಂದು ಹೇಳುತ್ತಿಲ್ಲ. ನಾನು ಯಾವತ್ತೂ ಆ ರೀತಿ ಹೇಳುವವನಲ್ಲ. ನಮ್ಮ ಭಾಗದಲ್ಲಿ ೧೫೦ ಎಕರೆ ಜಮೀನಿದ್ದರೂ ಕೂಡ ಬಡ ರೈತನಾಗಿದ್ದಾನೆ. ೧೫೦ ಎಕರೆ ಎಂದರೆ ಕೇಳುವುದಕ್ಕೆ ಬಹಳ ದೊಡ್ಡದಾಗಿ ಕಾಣುತ್ತದೆ ಅಷ್ಟೆ. ಪ್ರಯೋಜನ ಇಲ್ಲ. ಆದ್ದರಿಂದ ಅಲ್ಲಿರುವವರನ್ನು 'ರೈತ' ಎಂದು ಗಮನದಲ್ಲಿಟ್ಟುಕೊಂಡು ಮಿದ್ದಾಗಿ ಪರಿಶೀಲನೆ ಮಾಡಿ ದಯವಿಟ್ಟು ಸಾಲ ತೀರಿಸುವುದಕ್ಕೆ ಟೈಂ ಎಕ್ಸ್‌ಟೆನ್‌ಷನ್ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್.—ನಾನು ಆಗಲೇ ಹೇಳಿದೆ, ಆ ಭಾಗದಲ್ಲಿ ಯಾರು ಯಾರು ಸಾಲ ತೆಗೆದುಕೊಂಡಿದ್ದಾರೆ ಅವರ ಪರಿಸ್ಥಿತಿ ಏನು ಅಲ್ಲಿರತಕ್ಕ ಪ್ರದೇಶ ಎಂಥಾದ್ದು, ನೀರಾವರಿ ಪ್ರದೇಶವೇ, ಖುಷ್ಕಿ ಜಮೀನಿರತಕ್ಕ ಪ್ರದೇಶವೇ ಎಂಬುದನ್ನು ವಿಚಾರ ಮಾಡಿ ನೋಡೋಣ ಎಂದು ಹೇಳಿದ್ದೇನೆ. ಈಗ ಏನು ಒಂದು ವರ್ಷ ಟೈಂ ಕೇಳಿದ್ದಾರೆ ಅದನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಎರಡು ಮೂರು ಸಾರಿ ಸಮಯ ಕೊಟ್ಟರೂ ಅಲ್ಲಿ ಅವರಿಗೆ ಹಣ ಕಟ್ಟುವುದಕ್ಕಾಗಲಿಲ್ಲ. ಇನ್ನು ಮುಂದೆ ಸಮಯ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ತಾವು ರಿಯಾಯಿತಿ ಕೊಡದೇ ಹೋದರೆ ಯಾರಿಗೂ ಹಣ ಮರುಪಾವತಿ ಮಾಡುವುದಕಾ ಗುವುದಿಲ್ಲ, ತೊಂದರೆಯಾಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಪುನರ್ವಿಮರ್ಶೆ ಮಾಡುವುದು ಒಳ್ಳೆಯದು ಆ ಬಗ್ಗೆ ಯೋಚನೆ ಮಾಡುತ್ತಿರಾ ?

ಶ್ರೀ ಕೆ.ಎಚ್. ರಂಗನಾಥ್.—ಸ್ವಾಮಿ, ಈಗಾಗಲೇ ನಾನು ಏನೂ ರಿಯಾಯಿತಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದೇನೆ. ಈ ವರ್ಷದ ಮಳೆ ಬೆಳೆ ನೋಡಿಕೊಂಡು ವಿಚಾರ ಮಾಡೋಣ.

ಶ್ರೀ ಸಿ.ಎ. ಚಂದ್ರೇಗೌಡ.—೧೯೭೬ನೇ ಇಸವಿ ಮಾರ್ಚಿ ಆಖೈರಿನೊಳಗೆ ಟ್ರಾಕ್ಟರ್, ಪಂಪ್ ಸೆಟ್ ಹಣ ಬಡ್ಡಿ ಸಮೇತ ಕಟ್ಟಿದವರಿಗೆ ಪೀನಲ್ ಇಂಟರೆಸ್ಟ್ ಮಾಫಿ ಮಾಡುತ್ತೇವೆಂದು ಸರ್ಕಾರಿ ಆಜ್ಞೆ ಹೊರಡಿಸಿದ್ದರು. ೧೯೭೫ಕ್ಕೆ ಕಂತು ಮುಗಿಯುತ್ತದೆ. ೧೯೭೬ರಲ್ಲಿ ಸಿಂಪಲ್ ಇಂಟರೆಸ್ಟ್ ಪಾತ್ರ ಅಸಲು ಪೂರ್ತಿ ಕಟ್ಟಿರುತ್ತಾನೆ. ೭೨ರಿಂದ ೭೬ಕ್ಕೆ ಮೂರು ವರ್ಷಕ್ಕೆ ಡಿಫರೆನ್ಷಿಯಲ್ ಇಂಟರೆಸ್ಟ್ ಕಟ್ಟಬೇಕೆಂದು ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಕೆ.ಎಚ್. ರಂಗನಾಥ್,—ಮಾನ್ಯ ಸದಸ್ಯರು ಇಂಥ ವಿಚಾರ ಯಾವುದಾದರೂ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ನಾನು ವಿಚಾರಿಸುತ್ತೇನೆ.

## Forest Area in Karnataka State

279. SRI V.S. KOUJALGI (Arbhavi).—Will the Minister for Food and Forests be pleased to state:—

(*a*) The total acreage in Karnataka State—

(i) reserved Forest Area;

(ii) unreserved Forest Area;

(*b*) How much area is planted in (i) and (ii)?

SRI G. RAME GOWDA (Minister for Food and Forests).—

(*a*) (i) Reserved Forest—28,95,158 Hectares.
(ii) Unreserved Forest—5,78,308 Hectares.

(*b*) (i) Reserved Forest—4,10.840 Hectares.
(ii) Unreserved Forest—45,838 Hectares.

ಶ್ರೀ ವಿ. ಎಸ್. ಕೌಜಲಗಿ,—ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಅರಣ್ಯದ ಕ್ಷೇತ್ರ ಎಷ್ಟು ?

† ಶ್ರೀ ಜಿ. ರಾಮೇಗೌಡ,—೩೪, ೭೩, ೪೬೬ ಹೆಕ್ಟೇರುಗಳು.

ಶ್ರೀ ವಿ. ಎಸ್. ಕೌಜಲಗಿ.—ಸ್ವಾಮಿ, ತಾವು ಇದರಲ್ಲಿ ಕರ್ನಾಟಕ ರಾಜ್ಯದಲ್ಲಿ ಮಿಸಲಿಟ್ಟಿರುವ ಅರಣ್ಯ ಪ್ರದೇಶ ೨೮, ೯೫, ೧೫೮ ಹೆಕ್ಟೇರುಗಳು ಎಂದು ಹೇಳಿದ್ದೀರಿ. ಇದರಲ್ಲಿ ೪, ೧೦, ೪೮೦ ಹೆಕ್ಟೇರುಗಳಲ್ಲಿ ಪ್ಲಾಂಟೇಷನ್ ಮಾಡಿದ್ದಿರಿ. ಇಲ್ಲಿಯವರೆಗೆ ಪ್ಲಾಂಟೇಷನ್ ಮಾಡುವುದಕ್ಕೆ ಎಷ್ಟು ದುಡ್ಡು ಖರ್ಚಾಗಿದೆ ಮತ್ತು ಎಷ್ಟು ಗಿಡಗಳು ಬೆಳೆದಿವೆ ಎಂಬುದನ್ನು ದಯವಿಟ್ಟು ಹೇಳುತ್ತೀರಾ ?

ಶ್ರೀ ಜಿ. ರಾಮೇಗೌಡ.—ಇದುವರೆಗೆ ಹಲವಾರು ಸ್ಪೀಸಿಸೆಗೆ ಪ್ಲಾಂಟೇಷನ್ ಮಾಡಿದ್ದೇವೆ. ಟೀಕ್‌ಗೆ ೧, ೦೫, ೪೩೩ ಹೆಕ್ಟೇರ್‌ಗಳಿಗೆ ಪ್ಲಾಂಟೇಷನ್ ಮಾಡಿದ್ದೇವೆ. Matchue speciesಗೆ ೩೩, ೭೧೧ ಹೆಕ್ಟೇರುಗಳಲ್ಲಿ ಪ್ಲಾಂಟೇಷನ್ ಮಾಡಲಾಗಿದೆ, ಕ್ಯಾಷ್ಯೂಗೆ ೨೬, ೪೨೨ ಹೆಕ್ಟೇರುಗಳಲ್ಲಿ ಮಾಡ ಲಾಗಿದೆ, ಯೂಕ್ಲಿಪ್ಟಸ್ ೮೨, ೬೭೬ ಹೆಕ್ಟೇರುಗಳಿಗೆ ಮಾಡಲಾಗಿದೆ, fuel plantation ೨,೦೮,೪೦೯ ಹೆಕ್ಟೇರುಗಳಿಗೆ ಮಾಡಲಾಗಿದೆ.

ಶ್ರೀ ವಿ. ಎಸ್. ಕೌಜಲಗಿ.—ಸ್ವಾಮಿ ತಾವು ಉತ್ತರದಲ್ಲಿ ಕೊಟ್ಟಿರುವ ಹಾಗೆ ೫, ೭೮, ೩೦೮ ಹೆಕ್ಟೇರು ಮೀಸಲಿಡದಿರುವ ಅರಣ್ಯ ಪ್ರದೇಶದ ಪೈಕಿ ಕೇವಲ ೪೫೫, ೮೩೮ ಹೆಕ್ಟೇರುಗಳಲ್ಲಿ ಮಾತ್ರ ಪ್ಲಾಂಟೇಷನ್ ಮಾಡಿದ್ದೀರಿ. ಉಳಿದಿದ್ದರಲ್ಲಿ ಸರ್ಕಾರ ಯಾವಾಗ ಪ್ಲಾಂಟೇಷನ್ ಮಾಡುತ್ತದೆ ? ಏನಾದರೂ ಮಾಡುವುದಕ್ಕೆ ಯೋಚನೆ ಮಾಡಿದೆಯೇ ?

ಶ್ರೀ ಜಿ. ರಾಮೇಗೌಡ.—ಸತತವಾಗಿ ಈ ಕಾರ್ಯ ನಡೆಯಲೇಬೇಕೆಂಬ ಸದುದ್ದೇಶದಿಂದ ೨೦ ವರ್ಷದ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದರಲ್ಲಿ ಈ ವರ್ಷ ಟೀಕ್‌ನಲ್ಲಿ ೩,೭೦೦ ಹೆಕ್ಟೇರುಗಳು, ಸಾಫ್ಟ್ ವುಡ್‌ನಲ್ಲಿ ೩,೬೦೦ ಹೆಕ್ಟೇರುಗಳು ಪ್ಯೂಯಲ್ ೨೦ ಸಾವಿರ ಹೆಕ್ಟೇರುಗಳಲ್ಲಿ,